ಓ ಎಸ್ 26/2014 ಪಿ.ಡಬ್ಲ್ಯೂ: 1

ಇಂದು ದಿಃ 24/2/2020 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಕೆ ಟಿ ಆರ್ ವಕೀಲರಿಂದಃ

ನನ್ನ ತಾಯಿ ಗೌರಮ್ಮ ರವರ ತಂದೆಯ ಹೆಸರು ಜವರಯ್ಯ. ಜವರಯ್ಯ ರವರ ಪತ್ನಿಯ ಹೆಸರು ಸಿದ್ದಮ್ಮ. ಸದರಿ ದಂಪತಿಗೆ ಗೌರಮ್ಮ ಒಬ್ಬಳೇ ಮಗಳು ಹೊರತು ಬೇರೆ ಸಂತತಿ ಇಲ್ಲ. ಜವರಯ್ಯನ ತಂದೆಯ ಹೆಸರು ಕೊಳ್ಳಿ ಮಂಚಯ್ಯ. ಜವರಯ್ಯನ ತಾಯಿಯ ಹೆಸರು ತಿಮ್ಮಮ್ಮ. ನನ್ನ ತಾಯಿ ಗೌರಮ್ಮ ಸಮಾಜಕಲ್ಯಾಣ ಇಲಾಖೆಯಲ್ಲಿ ಉದ್ಯೋಗಿಯಾಗಿದ್ದು ಎಂದರೆ ನಿಜ. ದಾವಾ ತಪಶೀಲು ಐಟಂ ನಂ.1 ನನ್ನ ತಾಯಿಯ ಸ್ವಯಾರ್ಜಿತ ಆಸ್ತಿ ಎಂದರೆ ನಿಜ. ಅದನ್ನು ನನ್ನ ತಾಯಿಯ ಜೀವಿತಕಾಲದಲ್ಲಿಯೇ ನಿವೇಶನವಾಗಿ ಭೂಪರಿವರ್ತನೆ ಮಾಡಲಾಗಿತ್ತು ಎಂದರೆ ನಿಜ. ಅದರಲ್ಲಿ ಒಂದು ಸೈಟನ್ನು ಎಂ ಎಸ್ ಯೋಗೇಶ್ ರವರಿಗೆ ನನ್ನ ತಾಯಿ ಮಾರಾಟ ಮಾಡಿದ್ದರು ಎಂದರೆ ನಿಜ. ಕೆಲವು ಸೈಟುಗಳನ್ನು ನನ್ನ ತಾಯಿ ಅವರ ಮಕ್ಕಳ ಹೆಸರಿಗೆ ಖಾತೆ ಮಾಡಿಕೊಟ್ಟಿದ್ದಾರೆ ಎಂದರೆ ನಿಜ. ದಾವಾ ಐಟಂ ನಂ.2 ಅಂದರೆ ಬಸವಪುರದ ಜಮೀನು 1 ನೇ ಪ್ರತಿವಾದಿಗೆ ಭೂನ್ಯಾಯಮಂಡಳಿಯಿಂದ ಮಂಜುರಾಗಿತ್ತು ಎಂದರೆ ನಿಜ. ಜವರಯ್ಯ ರವರು ಒಂದು ವೀಲುನಾಮೆ ಮೂಲಕ ದಾವಾ ಐಟಂ ನಂ.2 ಮತ್ತು 3 ನ್ನು 1 ಮತ್ತು 2 ನೇ ಪ್ರತಿವಾದಿಗಳಿಗೆ ಕೊಟ್ಟಿದ್ದರು ಎಂದರೆ ಅದರಲ್ಲಿ ನಮಗೆ ಆಸ್ತಿ ಬರಬೇಕು ಎಂದು ನುಡಿಯುತ್ತೇನೆ. ಈಗಾಗಲೇ 1 ರಿಂದ 3 ನೇ ಪ್ರತಿವಾದಿಗಳಿಗೆ ಸ್ವತ್ತು ಬಂದಿರುವುದರಿಂದ ಹಾಗು ಖಾತೆ ಬದಲಾವಣೆಯನ್ನು ನನ್ನ ತಾಯಿಯೇ ಮಾಡಿಕೊಟ್ಟಿರುವುದರಿಂದ ವಾದಿಯರಿಗೆ ಯಾವುದೇ ಹಿಸ್ಸೆ ಬರಬೇಕಾಗಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಇತರೆ ಪ್ರತಿವಾದಿಗಳ ಪರ

ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.